ರುಚಿಕರವಾದ ಉಪಹಾರ
ಸಿಹಿ – ಖಾರ ತಿಂಡಿಗಳು
ನ್ಯೂ ಕೋರ್ಟ್ ರೆಸ್ಟೋರೆಂಟ್
ಹೊಸ ಬಸ್‌ಸ್ಟ್ಯಾಂಡ್ ಬಳಿ
ಕುಂದಾಪುರ
ಫೋ : 232878

www.kundaprabha.com e-mail : kundaprabha@gmail.com

# ಕುಂದಪ್ರಭ
ವಾರಪತ್ರಿಕೆ

ಸ್ಥಾಪನೆ : 1948
SJ
6 ದಶಕಗಳ
ವಿಶ್ವಾಸನೀಯ ಸೇವೆಯಲ್ಲಿ
ಶೇಟ್ ಜ್ಯುವೆಲ್ಲರ್ಸ್
ಶಂಕರ್ ಶೇಟ್ ಬಿಲ್ಡಿಂಗ್
ಮುಖ್ಯರಸ್ತೆ, ಕುಂದಾಪುರ
ಫೋನ್ : 230242

॥ ಸಂಪುಟ : 26 ॥ ಸಂಚಿಕೆ : 41 Udp/1263/2015-17 || R.NO.50495/91 ॥ ತಾರೀಕು : 08–11–2016 ॥ ರೂ 5/– ॥ ವಾರ್ಷಿಕ ಚಂದಾ : 300/– ಅಂಚೆಯಲ್ಲಿ : 350/

# ಉಡುಪಿ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರು







ಉಡುಪಿ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ 2016ರಲ್ಲಿ ಈ ಬಾರಿ ಕುಂದಾಪುರದ 6 ಮಂದಿಗೆ ಅವಕಾಶ ಲಭ್ಯವಾಗಿದೆ. ಸಮಾಜಸೇವಾ ಕ್ಷೇತ್ರ , ಯೊಗಶಿಕ್ಷಣ, ಸಾಹಿತ್ಯ, ಪತ್ರಿಕಾರಂಗ, ಯಕ್ಷಗಾನ ಕ್ಷೇತ್ರದಲ್ಲಿ ಕುಂದಾಪುರ ತಾಲೂಕಿನವರು ಪ್ರಶಸ್ತಿಗೆ ಪಾತ್ರರಾಗಿದ್ದಾರೆ. ಜಿಲ್ಲಾಮಟ್ಟದಲ್ಲಿ ಖ್ಯಾತರಾದ ಬಿ.ಸಿ.ರಾವ್ ಶಿವಪುರ, ಓಂಶ್ರೀ ವಾದಕ, ಶ್ರೀಧರ್ ನಾಯಕ್ ಕೊಕ್ಕರ್ಣೆ ಹಾಗೂ ಹಿರಿಯ ಕವಿ ಸಾಹಿತಿ ಮಾಧವಿ ಭಂಡಾರಿ, ಪ್ರಶಸ್ತಿ ಸಮಾರಂಭದಲ್ಲಿ ಗಮನ ಸೆಳೆದರು. **ಉಡುಪಿ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ವಿಜೇತರು.:** ಗುರುರಾಜ್ ಸನಿಲ್ ಉಡುಪಿ, ಸತೀಶ್ ಸಾಲ್ಯಾನ್ ಈಶ್ವರನಗರ ಮಣಿಪಾಲ, ರತ್ನಾಕರ್ ಸಾಮಂತ್ ಸರಳೆಬೆಟ್ಟು ಮಣಿಪಾಲ, ಕೆ. ರಮೇಶ್ ಶೆಟ್ಟಿ ಕುಂಜಿಬೆಟ್ಟು ಉಡುಪಿ, **ಬಿ.ಮೋಹನಚಂದ್ರ ಕಾಳಾವರ್‌ಕರ್ ಕಾಳಾವರ**, ತಲ್ಲೂರು ಶಿವರಾಮ ಶೆಟ್ಟಿ ಉಡುಪಿ, **ಮಾರಣಕಟ್ಟೆ ಕೃಷ್ಣಮೂರ್ತಿ ಮಂಜ**, ಚಿತ್ತೂರು, ಡಾ|ಸುನೀತಾ ಕೊಕ್ಕರ್ಣೆ, ತುಳುಕೂಟ ಉಡುಪಿ ಪರವಾಗಿ ಇಂದ್ರಾಳಿ ಜಯಕರ ಶೆಟ್ಟಿ, **ಎಂ.ಇಬ್ರಾಹಿಂ ಗಂಗೊಳ್ಳಿ** (ಸಮಾಜ ಸೇವೆ), **ಎಂ.ಸಂಜೀವಣ್ಣ ಮೂಡುಕೇರಿ ಕುಂದಾಪುರ** (ಯೋಗ ಶಿಕ್ಷಣ) **ಕೆ.ರತ್ನಾಕರ ಕಿಣಿ ಅಂಪಾರು, ಜೊನ್ ಡಿ'ಸೋಜಾ ಕುಂದಾಪುರ** (ಪತ್ರಿಕಾರಂಗ), ಉದಯ ಕುಮಾರ್ ವೈ, ಕಟಪಾಡಿ, ನಿತ್ಯಾನಂದ ಕೆಮ್ಮಣ್ಣು, ಬ್ರಹ್ಮಾವರ ಸ್ಪೋರ್ಟ್ಸ್ ಕ್ಲಬ್ (ಕ್ರೀಡಾಕ್ಷೇತ್ರ) ರವಿಕುಮಾರ್ ಕಡೇಕಾರು, ರಾಜು ಬಿ.ತೋನ್ಸೆ, ರಮಾನಂದ ನಾಯಕ್ ಕಾರ್ಕಳ ಜೋಡುರಸ್ತೆ, **ಯೋಗೇಶ್ ಶಿರೂರು** (ನಾಟಕ ಕ್ಷೇತ್ರ) ಕೆ.ಓಂಶ್ರೀ ಶ್ರೀಧರ ನಾಯಕ್ ಕೊಕ್ಕರ್ಣೆ (ಸಂಗೀತ), ವಿಷ್ಣು ಭಜನಾ ಮಂಡಳಿ ಎರ್ಮಾಳು, ಬಡ (ಭಕ್ತಿಗೀತೆ) ಉದಯ ಸೇರಿಗಾರ ಅಲೆವೂರು (ಸಾಕ್ಸಫೋನ್, ನಾದಸ್ವರ ವಾದಕರು), ಕೆ.ಎಸ್.ವಿಷ್ಣುಮೂರ್ತಿ ಬಾಸ್ರಿ ಕೆಳಕುಂಜಾಲು–ನೀಲಾವರ, **ಚಿಕ್ಕ ಪೂಜಾರಿ ಪಡಿಯಾರ್‌ಹಿತ್ಲು**, ಶಿರೂರು, (ಯಕ್ಷಗಾನ), ಕೂರಾಡಿ ನಾಗರಾಜ ಆಚಾರ್ಯ ಹಂದಾಡಿ ಗ್ರಾಮ (ಶಿಲ್ಪಕಲೆ, ದಾರು ಶಿಲ್ಪ, ಶಿಲಾ ಶಿಲ್ಪ) ರಾಘವೇಂದ್ರ ನಾಯಕ್ ಶಿರ್ವ (ಕೃಷಿ), ಬಿ.ದೇವರಾಜ್ ಪಡುಬೆಳ್ಳೆ , ಬಿ.ಸಿ.ರಾವ್ ಶಿವಪುರ (ಧಾರ್ಮಿಕ) ಇವರು ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿಯನ್ನು ಸ್ವೀಕರಿಸಿದರು.

# ಶಿವಪ್ರಸಾದ ಗ್ರ್ಯಾಂಡ್ ಉದ್ಘಾಟನೆ



ಹೋಟೆಲ್ ಉದ್ಯಮದಲ್ಲಿ ತನ್ನದೇ ಆದ ಛಾಪನ್ನು ಮೂಡಿಸಿ ರಾಜ್ಯದ ಉದ್ದಗಲಕ್ಕೂ ಹೆಸರುವಾಸಿಯಾಗಿ ಐದು ದಶಕಗಳಿಂದ ಹೆಸರಾಗಿರುವ ಕುಂದಾಪುರದ ಶಿವಪ್ರಸಾದ್ ಹೋಟೆಲ್ ವಿನೂತನ ಮಾದರಿಯಲ್ಲಿ ಕುಂದಾಪುರದಲ್ಲೇ ಪ್ರಥಮ ಎನ್ನಬಹುದಾದ ರೀತಿಯಲ್ಲಿ ಪುನರ್ ನಿರ್ಮಾಣಗೊಂಡು ಶಿವಪ್ರಸಾದ್ ಗ್ರ್ಯಾಂಡ್ ಹಾಗೂ ಶಿವಪ್ರಸಾದ್ ಸ್ಕ್ವೇರ್ ಹೆಸರಲ್ಲಿ ಸ್ಥಾಪನೆಯಾಗಿ ಉದ್ಘಾಟನೆಗೊಂಡಿತು.

ಬಾರಕೂರು ಮಹಾಸಂಸ್ಥಾನದ ಡಾ| ವಿದ್ಯಾವಾಚಸ್ಪತಿ ವಿಶ್ವ ಸಂತೋಷ ಭಾರತೀ ಶ್ರೀಪಾದರು ಆಶೀರ್ವಚನ ನೀಡಿ, "ಹಲವು ವರ್ಷಗಳ ಹಿಂದಿನಿಂದಲೂ ಕುಂದಾಪುರದ ಜನತೆಗೆ ಶಿವಪ್ರಸಾದ್ ಹಾಗೂ ಹರಿಪ್ರಸಾದ್ ಹೋಟೆಲ್‌ಗಳು ವಿಶೇಷಕೊಡುಗೆಯನ್ನು ನೀಡಿದ್ದಲ್ಲದೇ ಎಲ್ಲರ ಪ್ರೀತಿ, ವಿಶ್ವಾಸಗಳಿಸಿದೆ. ಈಗಿನ ವ್ಯವಸ್ಥೆಗೆ ಅಗತ್ಯವಾಗಿರುವ ಎಲ್ಲರಿಗೂ ಸಲ್ಲುವಂತಹ ನೂತನ ಶಿವಪ್ರಸಾದ್ ಗ್ರ್ಯಾಂಡ್ ಹಾಗೂ ಶಿವಪ್ರಸಾದ್ ಸ್ಕ್ವೇರ್ ನಾಮಾಂಕಿತ ಈ ಎರಡೂ ಕಟ್ಟಡಗಳು ಕುಂದಾಪುರದ ಘನತೆಯನ್ನು ಹೆಚ್ಚಿಸಿವೆ ಎಂದರು.

ಇಲ್ಲಿನ ಅತ್ಯಾಧುನಿಕ ಸೌಲಭ್ಯಗಳು ಯಾವ ಮಹಾ ನಗರದ ಕಟ್ಟಡಗಳಿಗೂ ಸರಿಹೊಂದುವಂತಿವೆ. ಈ ಹೋಟೆಲ್ ಹಾಗೂ ಸಂಕೀರ್ಣ ರಾಜ್ಯದಲ್ಲೇ ಹೆಸರುವಾಸಿಯಾಗಿ ಕರಾವಳಿಯಲ್ಲಿಯೇ ಸುಸಜ್ಜಿತ ಹೋಟೇಲ್ ಎನ್ನುವ ಕೀರ್ತಿಗೆ ಭಾಜನವಾಗಲಿ ಎಂದು ಹಾರೈಸಿದರು.

ಸಚಿವ ಬಿ.ರಮಾನಥ ರೈ ಅವರು ನೂತನ ಸಂಕೀರ್ಣವನ್ನು ಉದ್ಘಾಟಿಸಿ ಮಾತನಾಡಿ, ಕರಾವಳಿಯ ಜನರು ಶ್ರಮಜೀವಿಗಳಾಗಿದ್ದು, ಉದ್ಯಮ ಅವರ ಪ್ರಮುಖ ಆಯ್ಕೆಯಾಗಿದೆ. ಶ್ರಮದಿಂದ ಕೆಲಸ ನಿರ್ವಹಿಸಿದಾಗ ಯಶಸ್ಸು ಸಾಧ್ಯ. ಎನ್ನುವುದಕ್ಕೆ ಶಿವಪ್ರಸಾದ್ ಹಾಗೂ ಹರಿಪ್ರಸಾದ್ ಹೋಟೇಲ್‌ಗಳೇ ನಿದರ್ಶನ , ಜನರ ವಿಶ್ವಾಸಗಳಿಸಿಕೊಂಡು ಹಲವು ಉದ್ಯಮಗಳೊಂದಿಗೆ ಹೋಟೆಲ್ ಉದ್ಯಮವನ್ನು ವಿಸ್ತಾರವಾಗಿ ಮುಂದೆ ತರಲು ಅರುಣ್ ಕುಮಾರ್ ಶೆಟ್ಟಿ, ಪುತ್ರ ಅಭಿನಂದನ್ ಎ.ಶೆಟ್ಟಿ ಹಾಗೂ ಅವರ ಕುಟುಂಬಸ್ಥರ ಒಳ್ಳೆಯ ಗುಣಗಳೇ ಕಾರಣವಾಗಿವೆ. ಆಧುನಿಕ ಶೈಲಿಯಲ್ಲಿ ಜನರ ನಾಡಿಮಿಡಿತವನ್ನು ಅರಿತು ಈ ಸಂಕೀರ್ಣವನ್ನು ರೂಪಿಸಿದ್ದು ಅವರ ದೂರದರ್ಶಿತ್ವಕ್ಕೆ ಸಾಕ್ಷಿಯಾಗಿದೆ ಎಂದರು.

(7ನೇ ಪುಟಕ್ಕೆ)

# ಡಿ.ಶ್ರೀನಿವಾಸ ಕಾಮತ್‌ರಿಗೆ ಶ್ರದ್ಧಾಂಜಲಿ



ಹಿರಿಯ ಕೃಷಿಕ, ಮಂಗಳೂರು ಗೇರುಬೀಜ ಉದ್ಯಮ ಸೇರಿದಂತೆ ಹಲವು ಸಮೂಹ ಸಂಸ್ಥೆಗಳ ಮಾಲಿಕ ಸಿದ್ದಾಪುರ ದಕ್ಕೇರಬಾಳು ಶ್ರೀನಿವಾಸ ಕಾಮತ್(85)ರ ನಿಧನಕ್ಕೆ ಹಲವು ಗಣ್ಯರು ಸಂಘಸಂಸ್ಥೆಗಳ ಪ್ರತಿನಿಧಿಗಳು ಶ್ರದ್ಧಾಂಜಲಿ ಅರ್ಪಿಸಿ ಸಂತಾಪವ್ಯಕ್ತಪಡಿಸಿದ್ದಾರೆ.

ಕೃಷಿ, ತೋಟಗಾರಿಕೆ , ವ್ಯಾಪಾರದಿಂದ ಜೀವನ ಆರಂಭಿಸಿ ಸಿದ್ದಾಪುರದಲ್ಲಿ ಮಂಗಳೂರು ಗೇರುಬೀಜ ಉದ್ಯಮ ಆರಂಭಿಸಿದ್ದರು. ಮಹಾರಾಷ್ಟ್ರದ ಚಂದಘಡದಲ್ಲಿ ಶ್ರೀ ಮಹಾಲಕ್ಷ್ಮೀ ಕ್ಯಾಶ್ಯೂ ಇಂಡಸ್ಟ್ರೀಸ್, ಬಂಟ್ವಾಡಿಯಲ್ಲಿ ಸಪ್ತಮಿ ಗೇರುಬೀಜ ಉದ್ಯಮ , ಶಿವಮೊಗ್ಗ ಜಿಲ್ಲೆಯ ರಿಪ್ಪನಪೇಟೆ ಹೊಸನಗರದಲ್ಲಿ ಮಹಾಮ್ಮಾಯ ಗೇರುಬೀಜ ಉದ್ಯಮ. ಮಂಗಳೂರಿನಲ್ಲಿ ಐಸ್‌ಕ್ಯಾಂಡಿ ಫ್ಯಾಕ್ಟರಿ, ಸಿದ್ದಾಪುರ ರೈಸ್‌ಮಿಲ್, ಮಹಮ್ಮಾಯ ಗೇರುಬೀಜ ಉದ್ಯಮ, ಮಂಗಳೂರಲ್ಲಿ ಐಸ್‌ಕ್ಯಾಂಡಿ ಫ್ಯಾಕ್ಟರಿ , ಸಿದ್ದಾಪುರ ರೈಸ್‌ಮಿಲ್, ಮಹಮ್ಮಾಯ ಮಹಾಗಣಪತಿ ಟ್ರಾನ್ಸ್‌ಪೋರ್ಟ್ಸ್ ಹೆಸರಲ್ಲಿ ಖಾಸಗಿ ಬಸ್ ಸರ್ವೀಸ್ , ಸಿದ್ದಾಪುರ ಜನ್ನಾಲೆ ಮಹಾಮ್ಮಾಯ ಆಗ್ರೋ ಇಂಡಸ್ಟ್ರೀಸ್ ಮಾಲೀಕರಾಗಿ ಸಾವಿರಾರು ಮಂದಿಗೆ

(4ನೇ ಪುಟಕ್ಕೆ)

## ಅಭಿನಂದನೆಗಳು



## ಮಾರಣಕಟ್ಟೆ ಕೃಷ್ಣಮೂರ್ತಿ ಮಂಜ
### ಹೈದರಾಬಾದ್

ಉಡುಪಿ ಜಿಲ್ಲಾ ಕನ್ನಡ ರಾಜ್ಯೋತ್ಸವ ಪ್ರಶಸ್ತಿ 2016
ಪಡೆದ ನಿಮಗೆ ಹೃತ್ಪೂರ್ವಕ ಅಭಿನಂದನೆಗಳು.
ನಿಮ್ಮ ಸಾಮಾಜಿಕ ಸೇವಾ ಕಾರ್ಯಗಳು ಇನ್ನಷ್ಟು
ಉತ್ಸಾಹದಿಂದ ಮುಂದುವರಿಯಲಿ ಎಂದು
ಶುಭಹಾರೈಸುವ

**ಎನ್.ಆರ್.ನಾರಾಯಣರಾವ್ ಮತ್ತು ಮಕ್ಕಳು**
ಹೋಟೆಲ್ ದ್ವಾರಕಾ – ಬೆಂಗಳೂರು
ಹೋಟೆಲ್ ಸುಧಾ & ನಂದಿನಿ ಗ್ರೂಪ್ ಆಫ್ ಹೋಟೆಲ್ಸ್ –
ತೆಲಂಗಾಣ –ಆಂಧ್ರ –ಕರ್ನಾಟಕ
**ಎನ್.ಆರ್.ನಾಗಪ್ಪಯ್ಯ ಮತ್ತು ಮಕ್ಕಳು**
ಹೋಟೆಲ್ ಸುಧಾ ದರ್ಶಿನಿ
ಚಿಕ್ಕಡಪಳ್ಳಿ, ಹೈದರಾಬಾದ್
**ಎನ್.ಕೃಷ್ಣಮೂರ್ತಿ ರಾವ್ ಮತ್ತು ಸಹೋದರರು**
ಹೋಟೆಲ್ ಎನ್.ಕೆ.ಎಮ್ ಗ್ರ್ಯಾಂಡ್, ಹೈದರಾಬಾದ್